# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1328/2021
ಮಂಡನಾಧಿಕಾರಿಗಳ ಶಾಖೆ. ಪಿ.ಓ. ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ,ಬೆಂಗಳೂರು.
ದಿನಾಂಕ: 19/01/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ (1) ಶ್ರೀ ನಾಗರಾಜು ಡಿ.ಎಂ ತಂದೆ ಮಹಲಿಂಗಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ (2) ಶ್ರೀ ಶಿವಣ್ಣ ತಂದೆ ವೆಂಕಟಪ್ಪ, ಬಿಲ್ ಕಲೆಕ್ಟರ್, ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು ಇವರು ತುಮಕೂರು ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ (1) ಶ್ರೀ ನಾಗರಾಜು ಡಿ.ಎಂ ತಂದೆ ಮಹಲಿಂಗಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ, ಸಿರಾ ತಾಲ್ಲೂಕು. ತುಮಕೂರು ಜಿಲ್ಲೆ (2) ಶ್ರೀ ಶಿವಣ್ಣ ತಂದೆ ವೆಂಕಟಪ್ಪ, ಬಿಲ್ ಕಲೆಕ್ಟರ್, ಚಿನ್ನೇನಹಳ್ಳಿ ಗ್ರಾಮ ಪಂಚಾಯ್ತಿ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ '1 ಮತ್ತು 2 ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ನರಸಿಂಹಮೂರ್ತಿ ಎನ್ ತಂದೆ ನರಸಪ್ಪ, ನೆಲದಿಮ್ಮನಹಳ್ಳಿ, ಕಳ್ಳಂಬೆಳ್ಳ ಹೋಬಳಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರ ದೊಡ್ಡಮ್ಮನವರಾದ ಶ್ರೀಮತಿ ಕನ್ನಮ್ಮ ಕೋಂ ಲೇ: ಗೋವಿಂದಪ್ಪರವರ ಜಮೀನಿನಲ್ಲಿ ಕೋಳಿ ಫಾರ್ಮ ನಿರ್ಮಾಣ ಮಾಡಲು

ಎನ್. ಒ.ಸಿ. ಪಡೆಯುವ ಸಲುವಾಗಿ ದಿನಾಂಕ 20/09/2018 ರಂದು 2ನೇ ಎದುರುದಾರರವರಿಗೆ ವಿಚಾರಿಸಿದ್ದು, 2ನೇ ಎದುರುದಾರರು 1ನೇ ಎದುರುದಾರ್‌ರವರು ಎನ್. ಒ. ಸಿ. ನೀಡಲು 10,000/- ರೂಪಾಯಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ನಂತರ ದೂರುದಾರರು 1ನೇ ಎದುರುದಾರರ ಬಳಿ ಹೋಗಿ ವಿಚಾರಿಸಲಾಗಿ 5,000/- ಕೊಟ್ಟು ಹೋಗಿ ಎಂದು ಲಂಚದ ಹಣಕ್ಕಾಗಿ ಒತ್ತಾಯಿಸಿರುತ್ತಾರೆ ಹಾಗೂ ದೂರುದಾರರ ಬಳಿ ಇದ್ದ ರೂ. 2,000/- ಗಳಿಗೆ 2ನೇ ಎದುರುದಾರರಾದ ಶಿವಣ್ಣರವರು ದೂರುದಾರರಿಂದ ಅಂದೇ ಪಡೆದಿರುತ್ತಾರೆ. ಸದರಿ ಬೇಡಿಕೆಯನ್ನು ದೂರುದಾರರು ಮೊಬೈಲ್‌ನಲ್ಲಿ ಧ್ವನಿ ಮುದ್ರಣ ಮಾಡಿಕೊಂಡಿರುತ್ತಾರೆ. ಸದರಿ ಲಂಚದ ಹಣ ಎದುರುದಾರರಿಗೆ ನೀಡಲು ಇಷ್ಟವಿಲ್ಲದ ಕಾರಣ ದೂರುದಾರರು ತುಮಕೂರು ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು 27/09/2018 ರಂದು ನೀಡಿರುತ್ತಾರೆ. ಈ ಬಗ್ಗೆ ತುಮಕೂರು ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 14/2018 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 27/09/2018 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಎದುರುದಾರರು ಲಂಚದ ಹಣ ಕೇಳುವ ಬಗ್ಗೆ ದೂರುದಾರರು ಮೊಬೈಲ್‌ನ ಮೆಮೋರಿ ಕಾರ್ಡಿನಲ್ಲಿ ವಾಯ್ಸ್ ರೆಕಾರ್ಡ್ ಮಾಡಿದ್ದು, ಸರ್ಕಾರಿ ಕೆಲಸ ನಿರ್ವಹಿಸಲು ಲಂಚದ ಹಣಕ್ಕೆ ಒತ್ತಾಯ ಮಾಡಿರುವುದಾಗಿ ತಿಳಿಸಿದ್ದು ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಲ್ಯಾಪ್‌ಟಾಪ್‌ಗೆ ಹಾಕಿ ಡಿ.ವಿ.ಡಿ.ಗೆ ವರ್ಗಾಯಿಸಿ ಅದನ್ನು ಪ್ಲೇ ಮಾಡಿ ನೋಡಲಾಗಿ ದೂರುದಾರ ಮತ್ತು ಎದುರುದಾರರು ನಡೆಸಿರುವ ಸಂಭಾಷಣೆಗಳು ಕನ್ನಡ ಭಾಷೆಯಲ್ಲಿರುತ್ತವೆ. ಸದರಿ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ ಲಿಪೀಕರಣ ಮಾಡಿ ಅಮಾನತ್ ಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 3,000/- ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಫಿನಾಫ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಫಿನಾಫ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ

ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಜಗದೀಶ್ ಎಸ್. ಬಿನ್ ಲೇಟ್ ಸಣ್ಣಪ್ಪ, ಕಛೇರಿ ವ್ಯವಸ್ಥಾಪಕರು, ಮಹಾನಗರ ಪಾಲಿಕೆ, ತುಮಕೂರು ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದ್ದಾರರಿಗೆ ವಾಯ್ಸ್ ರೆಕಾರ್ಡರನ್ನು ನೀಡಿದ್ದು ಅದನ್ನು ತನ್ನ ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ತಲೆ ಕೂದಲನ್ನು ಹಿಂದಕ್ಕೆ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ತನಿಖಾಧಿಕಾರಿಗಳು ಠಾಣೆಯಿಂದ ದೂರುದಾರರು, ಪಂಚ ಸಾಕ್ಷಿಗಳು ಹಾಗೂ ಸಿಬ್ಬಂಧಿಯವರೊಂದಿಗೆ ದಿನಾಂಕ 01/10/2018 ರಂದು ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಹೋಬಳಿಯ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಕಛೇರಿಗೆ ಹೊರಟಿರುತ್ತಾರೆ. ದೂರುದಾರರು ನೆರಳು ಸಾಕ್ಷಿ ಶ್ರೀ ಜಗದೀಶ ಎಸ್. ಬಿನ್ ಲೇಟ್ ಸಣ್ಣಪ್ಪ ಇವರೊಂದಿಗೆ ಎದುರುದಾರರು ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಶಾಲೆಯ ಕಂಪೌಂಡಿನಲ್ಲಿರುವ ಚಿನ್ನೇನಹಳ್ಳಿ ಗ್ರಾಮ ಪಂಚಾಯತಿಯ ಕಛೇರಿಗೆ ಹೋದಾಗ 1 ನೇ ಎದುರುದಾರರು 2ನೇ ಎದುರುದಾರರಿಗೆ ಲಂಚದ ಹಣ 3.000/- ರೂಪಾಯಿ ನೀಡುವಂತೆ ಸೂಚಿಸಿದ್ದರ ಮೇರೆಗೆ ಸದರಿ 2ನೇ ಎದುರುದಾರರು ಲಂಚದ ಹಣವನ್ನು ಸ್ವೀಕರಿಸಿ ತಾನು ಧರಿಸಿದ್ದ ಶರ್ಟಿನ ಮೇಲ್ಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ದೂರುದಾರರು ಹೊರಗೆ ಬಂದು ತನ್ನ ತಲೆ ಕೂದಲನ್ನು ಹಿಂದಕ್ಕೆ ಒರೆಸಿಕೊಳ್ಳುವ

ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಸದರಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಇರುತ್ತದೆ. ಸದರಿ ದ್ರಾವಣಗಳನ್ನು ಪ್ರತ್ಯೇಕ ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ ಸಂಗ್ರಹಿಸಿ ಸೀಲ್ ಮಾಡಿ ವಶಪಡಿಸಿಕೊಂಡಿರುತ್ತಾರೆ. 2ನೇ ಎದುರುದಾರರಿಗೆ ಬದಲಿ ಶರ್ಟಿನ ವ್ಯವಸ್ಥೆ ಮಾಡಿ, ಆತನು ಧರಿಸಿದ್ದ ಶರ್ಟನ್ನು ಕಳಚಿಕೊಂಡು ಪಿನಾಪ್ತಲಿನ್ ಪೌಡರ್ ಲೇಪಿತ ಲಂಚದ ಹಣ ಇಟ್ಟುಕೊಂಡಂತಹ ಜೇಬನ್ನು ಹೊರಭಾಗಕ್ಕೆ ತೆಗೆದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. 2ನೇ ಎದುರುದಾರರು ಲಂಚದ ಹಣ ಪಡೆದ ನೋಟುಗಳನ್ನು ಪರಿಶೀಲಿಸಲಾಗಿ, ಅವುಗಳ ಮೌಲ್ಯ ನೋಟುಗಳ ಸಂಖ್ಯೆ ಇವು ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದಂತಹ ನೋಟುಗಳ ಸಂಖ್ಯೆ ಮತ್ತು ಮೌಲ್ಯಕ್ಕೆ ತಾಳೆಯಾಗಿರುತ್ತದೆ. ಅವುಗಳನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ಸದರಿ ಗ್ರಾಮ ಪಂಚಾಯತಿ ಕಛೇರಿ ಕಟ್ಟಡವು ತಾತ್ಕಾಲಿಕ ಕಟ್ಟಡವಾಗಿರುವುದರಿಂದ ಅಲ್ಲಿ ವಿದ್ಯುತ್ ಸೌಲಭ್ಯಗಳು ಇಲ್ಲದೇ ಇರುವುದರಿಂದ ಎಲ್ಲರನ್ನೂ ಕರೆದುಕೊಂಡು ಅದೇ ಕಂಪೌಂಡ್‌ನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯ ಆಫೀಸ್ ರೂಮಿಗೆ ಬಂದು ಮುಖ್ಯ ಶಿಕ್ಷಕರ ಅನುಮತಿ ಪಡೆದು ಪಂಚನಾಮೆ ಜರುಗಿಸಿರುತ್ತಾರೆ. 2ನೇ ಎದುರುದಾರರು ದೂರುದಾರರ ಕಡತದ ಬಗ್ಗೆ ವಿಚಾರಿಸಲಾಗಿ, ಅದು ತಮ್ಮ ಬಳಿ ಕಡತ ಇರುವುದಾಗಿ ತಿಳಿಸಿ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಎದುರುದಾರರ ಮೇಲಾಧಿಕಾರಿ ಶ್ರೀ ಮೂರ್ತಿ ಬಿನ್ ಲೇಟ್ ಕರಿಯಪ್ಪ, ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಕಾರ್ಯನಿರ್ವಹಣಾ ಅಧಿಕಾರಿಗಳ ಕಛೇರಿ, ಶಿರಾ ಇವರಿಂದ ಮೂಲ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಅವರಿಂದ ದೃಢೀಕರಿಸಿಕೊಂಡು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ನಂತರ ಶ್ರೀ ಎಲ್. ಮೋಹನ್ ಕುಮಾರ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕಾ ಪಂಚಾಯಿತಿ, ಮಧುಗಿರಿ, ಹೆಚ್ಚುವರಿ ಪ್ರಭಾರ, ಶಿರಾ ತಾಲ್ಲೂಕಾ ಪಂಚಾಯತಿ ಇವರು ಹಾಜರಿದ್ದು ಅವರಿಗೆ ಟ್ರ್ಯಾಪ್ ಪೂರ್ವದಲ್ಲಿ ಹಾಗೂ ಟ್ರ್ಯಾಪ್ ಕಾರ್ಯಾಚರಣೆ ಕಾಲದಲ್ಲಿ ದೂರುದಾರರು ತಮ್ಮ ಮತ್ತು ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿ ಧ್ವನಿ ಮುದ್ರಿಸಿಕೊಂಡಿದ್ದು ಅವುಗಳನ್ನು ಕೇಳಿಸಿದಾಗ ಸದರಿಯವರು ತಾವು ಶಿರಾ ತಾಲ್ಲೂಕು ಪಂಚಾಯತಿಯಲ್ಲಿ ಪ್ರಭಾರ ಹುದ್ದೆಯಲ್ಲಿರುವುದರಿಂದ ಅವರ ಧ್ವನಿ ಪರಿಚಯ ಕಡಿಮೆ, ಆದ್ದರಿಂದ ಶಿರಾ

ತಾಲ್ಲೂಕು ಪಂಚಾಯತಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರಾದ ಮೂರ್ತಿ ರವರು ಧ್ವನಿ ಗುರ್ತಿಸುತ್ತಾರೆ ಎಂದು ತಿಳಿಸಿದ್ದರ ಮೇರೆಗೆ ಅವರು ಧ್ವನಿ ಕೇಳಿ ಗುರುತಿಸಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆಗ ಎರಡೂ ಸಂಭಾಷಣೆಗಳನ್ನು ಆಲಿಸಿ 2 ಮತ್ತು 1 ನೇ ಎದುರುದಾರರ ಧ್ವನಿಗಳನ್ನು ಗುರ್ತಿಸಿರುತ್ತಾರೆ. ಸದರಿ ಡಿ.ವಿ.ಡಿ.ಗಳನ್ನು ತನಿಖಾಧಿಕಾರಿಗಳು ವಶಪಡಿಸಿ ಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು 1 ಮತ್ತು 2ನೇ ಎದುರುದಾರರಿಗೆ ಈ ಪ್ರಕರಣದ ಬಗ್ಗೆ ವಿಚಾರಿಸಲಾಗಿ ಇಬ್ಬರೂ ಪ್ರತ್ಯೇಕವಾಗಿ ಸಮಜಾಯಿಷಿಗಳನ್ನು ನೀಡಿರುತ್ತಾರೆ. 1 ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ಕನ್ನಮ್ಮ ಕೋಂ ಗೋವಿಂದಪ್ಪರವರು ಕೋಳಿ ಸಾಗಾಣಿಕೆಗಾಗಿ ನಿರಾಪೇಕ್ಷಣ ದೃಢೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯನ್ನು ಪರಿಶೀಲಿಸಿ ನಿರಾಪೇಕ್ಷಣ ದೃಢೀಕರಣ ಪೀಜಿ (ಫೀಸ್) ಮತ್ತು ಅವರ ಮನೆ ಕಂದಾಯ ತೆರಿಗೆಯನ್ನು ಪಂಚಾಯತಿಯಲ್ಲಿ ಬಿಲ್ ಕಲೆಕ್ಟರ್ ಆದ ಶಿವಣ್ಣರವರಿಗೆ ನೀಡಲು ತಿಳಿಸಲಾಗಿದೆ. ಅಷ್ಟೆ ಅದಾರೆ ಈಗ ನನ್ನ ಮೇಲೆ ದುರುದ್ದೇಶದಿಂದ ಆಪಾದನೆ ಮಾಡಲಾಗಿದೆ. ಆದ್ದರಿಂದ ಈ ಆಪಾದನೆಯನ್ನು ಕೈ ಬಿಡಲು ತಮ್ಮಲ್ಲಿ ಮನವಿಯನ್ನು ಈ ಮೂಲಕ ಮಾಡಿಕೊಳ್ಳುತ್ತೇನೆ" ಎಂದು ನೀಡಿರುತ್ತಾರೆ. 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ಕನ್ನಮ್ಮ ಕೋಂ ಗೋವಿಂದಪ್ಪರವರು ಕೋಳಿ ಫಾರ್ಮ್ ಅರ್ಜಿ ಸಲ್ಲಿಸಿದ್ದು ಅರ್ಜಿ ಸಂಬಂಧಿಸಿದ್ದನೆ. ನಿರಾಕ್ಷೇಪಣ ಫೀ ಮತ್ತು ಮನೆ ಕಂದಾಯ ಕೊಟುವ ಹಣವನ್ನು ಅರ್ಜಿದಾರರಿಗೆ ಕಟ್ಟಲು ಹೇಳಿದೆ. ನಿರಾಕ್ಷೇಪಣ ಪತ್ರವನ್ನು ರಡಿ ಮಾಡಿಸಿ ಅರ್ಜಿದಾರ ದಾರಿ ಮದ್ಯದಲ್ಲಿ ಸಿಕಿದಂರರ ಈ ದಿನವೆ ಎನ್.ಒ.ಸಿ. ಯನ್ನು ಕೊಡಬೇಕದಂದ ದಾರಿ ಮದ್ಯದಲ್ಲಿ ತೆಗೆದು ಕೊಡಿ ಹೋದರು. ರಸ್ತಿ ಪುಸ್ತಕ ಕಛೇರಿಯಲ್ಲಿ ಇದರಿಂದ ರಸ್ತಿಯನ್ನು ಕೊಟಿದ್ದೆವು. ಅರ್ಜಿದಾರರು ಕೆಇಬಿ ಆಫೀಸ್ ಗೆ ಹೋದರಿಂದ ರಸ್ತುಯನ್ನು ಸೋಮವಾರ ಕೊಡುವಿರಿ ಎಂದ ಹೋದರು. ಈ ಮೊಸ್ತವನ್ನು ಎನ್. ಒ. ಸಿ ಮತ್ತು ಮನೆ ಕಂದಾಯ ಮಾತ್ರ ತೆಗೆದುಕೊಂಡಿರುತ್ತೇನೆ. ನಾನು ಯಾವುದೇ ಲಂಚ್‌ವಾಗಿ ಸ್ವೀಕರಿಸಿರುವುದಿಲ್ಲ. ಅದರಿಂದ ನನ್ನು ನಿರಾಪರಬಿಯಾಗಿದ್ದು, ಆರೋಪದಿಂದ ಮುಕ್ತಮಾಡಬೇಕಾಗಿ ಕೋಋುತ್ತೇನೆ" ಎಂದು ಸಮಜಾಜಿಷಿ ನೀಡಿರುತ್ತಾರೆ. ಆದರೆ ಸದರಿ ಸಮಜಾಯಿಷಿಗಳು ಪೂರಕ ಸಮಜಾಯಿಷಿಗಳಾಗದೆ ವ್ಯತಿರಿಕ್ತವಾಗಿದ್ದರಿಂದ ಅವುಗಳನ್ನು ಒಪ್ಪಲು ಬರಲಾರದು. ಅಮಾನತ್ ಪಂಚನಾಮೆ ಕಾಲದಲ್ಲಿ ಹಂತ ಹಂತವಾಗಿ ಫೋಟೋಗಳನ್ನು ತಗೆಸಿರುತ್ತಾರೆ. ನಂತರ ತನಿಖಾಧಿಕಾರಿಗಳು, ನೆರಳು ಸಾಕ್ಷಿ, ಸಹ ಪಂಚ ಅವರಿಂದ

ಅಲ್ಲಿಯ ನಡುವಳಿಕೆಗಳನ್ನು ತಿಳಿದು ಸವಿಸ್ತಾರ ಜಪ್ತಿ ಪಂಚನಾಮೆ ನಿರ್ವಹಿಸಿ, ದೂರುದಾರರ ಹಾಗೂ ಪಂಚರ ಸಮಕ್ಷಮ ಸದರಿ ಹಣವನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ.

5) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು 1 ಮತ್ತು 2ನೇ ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

6) ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ 1 ಮತ್ತು 2ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, 1 ಮತ್ತು 2ನೇ ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

8) ಮೊಬೈಲ್‌ನಲ್ಲಿಯ ಮುದ್ರಿತ ಧ್ವನಿ, ಎದುರುದಾರರ ಧ್ವನಿಗಳೊಂದಿಗೆ ಶ್ರೀ ಮೂರ್ತಿ, ಸಹಾಯಕ ನಿರ್ದೇಶಕರು, ತಾಲ್ಲೂಕ್ ಪಂಚಾಯಿತಿ, ಸಿರಾ ಇವರು ಎದುರುದಾರರ ಧ್ವನಿಗಳೆಂದು ಗುರ್ತಿಸಿರುತ್ತಾರೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

9) 1 ಮತ್ತು 2ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 27/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ 1 ಮತ್ತು 2ನೇ ಎದುರುದಾರರು "ನನ್ನ ವಿರುದ್ಧ 2ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯ, ತುಮಕೂರು ಜಿಲ್ಲೆ, ಅಪರಾಧ ಸಂಖ್ಯೆ 14/2018 ದಿನಾಂಕ 27/09/2019 ರಂತೆ ಮೊಕದ್ದಮೆ ಇದೇ ವಿಚಾರವಾಗಿ ನಡೆಯುತ್ತಿದೆ. ಒಂದೇ ವಿಚಾರದಲ್ಲಿ ಎರಡು ನ್ಯಾಯಾಲಯಗಳಲ್ಲಿ ವಿಚಾರಣೆ ನಡೆದು ಆಪಾದಿತರು ಎರಡು ನ್ಯಾಯಾಲಯಗಳಿಂದ ಒಂದೇ ಆಪಾದನೆಯ ಬಗ್ಗೆ ಶಿಕ್ಷೆಗೆ ಒಳಪಡಬಾರದು ಎಂಬ ಸಂವಿಧಾನದ ಆಶಯದಂತೆ (ಡಬಲ್ ಜಿಯೋಪಾರ್ಡಿ) ಅದರಂತೆ ಎರಡನೇ

ವಿಚಾರಣೆಯನ್ನು ಕರ್ನಾಟಕ ಲೋಕಾಯುಕ್ತ ನ್ಯಾಯಾಲಯದಲ್ಲಿ ಮುಂದುವರೆಸಬಾರದೆಂದು ಮತ್ತು ಮುಕ್ತಾಯ ಮಾಡಬೇಕು. ಮುಂದುವರೆದು ದೂರುದಾರರು ನರಸಿಂಹ ಮೂರ್ತಿ ರೂ. 3,000/- ಬಾಕಿ ತೆರಿಗೆ ಹಣವನ್ನು ಪಡೆದು ರಸೀದಿ ಹಾಕುವ ಸಂದರ್ಭದಲ್ಲಿ ಎಸಿಬಿ ಅಧಿಕಾರಿಗಳು ಜಪ್ತಿ ಮಾಡಿ ಪ್ರಕರಣ ದಾಖಲಿಸಿರುತ್ತಾರೆ. ನಾನು ಯಾವುದೇ ರೀತಿಯಲ್ಲಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ. ಹಾಗೂ ಕರ್ತವ್ಯ ಲೋಪ ಸಹ ಮಾಡಿರುವುದಿಲ್ಲ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದು, ಹೊರಿಸಲಾಗಿರುವ ಆಪಾದನೆಯನ್ನು ಕೈ ಬಿಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತಿದ್ದೇನೆ" ಎಂದು ಇಬ್ಬರೂ ಎದುರುದಾರರು ಏಕರೂಪದಲ್ಲಿ ಸಮಜಾಯಿಷಿಗಳನ್ನು ನೀಡಿರುತ್ತಾರೆ. ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಗಳಲ್ಲಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ವಿಚಾರಣೆಯಾಗುವ ಕ್ರಿಮಿನಲ್ ಪ್ರಕರಣಕ್ಕೂ ಮತ್ತು ಇಲಾಖಾ ವಿಚಾರಣೆಗೂ ವ್ಯತ್ಯಾಸವಿದೆ. ಎದುರುದಾರರ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಭ್ರಷ್ಟಾಚಾರ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 ರ ಅಡಿ ದುರ್ನಡತೆ ಎಸಗಿದ್ದರಿಂದ ಎರಡೂ ಪ್ರಕರಣಗಳ ವಿಚಾರಣೆಯು ಒಂದೇ ಆಗಿರುವುದಿಲ್ಲ. ಆದ್ದರಿಂದ ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

10) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

11) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

12) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

21/1/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.